<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ತರೀಕೆರೆ.</u>

ಸಿ.ಸಿ. ಸಂಖ್ಯೆ: 995/2023

ಫಿರ್ಯಾದುದಾರರು:- ತರೀಕೆರೆ ಪೊಲೀಸ್

-ವಿರುದ್ಧ-

ಆರೋಪಿ/ತರು: - ಚಂದ್ರಾನಾಯ್ಕ

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರ ಪ್ರಕಾರ ಆರೋಪಿ/ತರ ಹೇಳಿಕೆ</u>

ಪ್ರ:**1)** ಅಭಿಯೋಜನೆಯ ಪರ ಸಾಕ್ಷಿದಾರರು ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ**?**

ಉ:

ಪ್ರ:2) ಪ್ರಾ.ಸಾ-1 – ಕೃಷ್ಣನಾಯಕ್, ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ ದಿ:16.11.2022 ರಂದು ನಾನು ಠಾಣೆಯಲ್ಲಿದ್ದಾಗ ಬೇಲೇನಹಳ್ಳಿ ತಾಂಡ್ಯದಲ್ಲಿ ಯಾವುದೋ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮದ್ಯವನ್ನು ಮಾರಾಟ ಮಾಡುತ್ತಿದ್ದಾನೆಂಬ ಖಚಿತ ಮಾಹಿತಿ ಬಂದಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಮಾಹಿತಿ ಬಂದ ಮೇರೆಗೆ ನಾವು ಚಾಸಾ-4 ರಿಂದ 6 ಹಾಗೂ ಪಂಚರೊಂದಿಗೆ ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು ಕೂಡಲೇ ದಾಳಿ ಮಾಡಿದಾಗ ಸಾರ್ವಜನಿಕರು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿಹೋಗಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಆತನನ್ನು ವಿಚಾರಣೆ ಮಾಡಿ ಚೀಲವನ್ನು ಪರಿಶೀಲಿಸಿದಾಗ 90 ಎಂ ಎಲ್ ನ 95 ರ ಓ ಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಕಂಡುಬಂದಿದ್ದು, ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳಲು ಮತ್ತು ಮಾರಾಟ ಮಾಡಲು ಸ್ಥಳದಲ್ಲಿ ಯಾವುದೇ ಪರವಾನಿಗೆ ಇರಲಿಲ್ಲ ಎಂದು,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ಮದ್ಯವನ್ನು ಪ್ಲಾಸ್ಟಿಕ್ ಚೀಲದ ಸಮೇತ ತನ್ನ ವಶಕ್ಕೆ ಪಡೆದುಕೊಂಡು ನಂತರ

ಮುದ್ದೆಮಾಲಿನೊಂದಿಗೆ ಠಾಣೆಗೆ ಹಿಂತಿರುಗಿ ಸರ್ಕಾರದ ತರ್ಫೆ ತಾನೇ ಪಿರ್ಯಾದಿಯನ್ನು ಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ3) ಪ್ರಾ.ಸಾ-5– ವೇಣುಗೋಪಾಲ, ಪೊಲೀಸ್ ಮುಖ್ಯ ಪೇದೆರವರು ತಮ್ಮ ಸಾಕ್ಷ್ಯದಲ್ಲಿ ದಿಃ16.11.2022 ರಂದು ನಾನು ಠಾಣೆಯಲ್ಲಿದ್ದಾಗ ಬೇಲೇನಹಳ್ಳಿ ತಾಂಡ್ಯದಲ್ಲಿ ಯಾವುದೋ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂಬ ಮಾಹಿತಿ ಚಾಸಾ-1 ರವರಿಗೆ ಬಂದಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಮಾಹಿತಿ ಬಂದ ಮೇರೆಗೆ ನಾನು, ಚಾಸಾ-4 ಮತ್ತು 6, ಪಂಚರು ಹಾಗೂ ಚಾಸಾ-1 ರವರೊಂದಿಗೆ ಸದರಿ ಸ್ಥಳಕ್ಕೆ ಹೋಗಿ ನೋಡಿದಾಗ ಒಬ್ಬ ವ್ಯಕ್ತಿಯು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಯಾವುದೋ ವಸ್ತುಗಳನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರುವುದು ಕಂಡುಬಂದಿದ್ದು ಕೂಡಲೇ ದಾಳಿ ಮಾಡಿದಾಗ ಸಾರ್ವಜನಿಕರು ಮತ್ತು ಮಾರಾಟ ಮಾಡುತ್ತಿದ್ದ ವ್ಯಕ್ತಿ ಓಡಿಹೋಗಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ನಂತರ ಆತನನ್ನು ವಿಚಾರಣೆ ಮಾಡಿ ಚೀಲವನ್ನು ಪರಿಶೀಲಿಸಿದಾಗ 90 ಎಂ ಎಲ್ ನ 95 ರ ಓ ಸಿ ವಿಸ್ಕಿ ಟೆಟ್ರಾ ಪ್ಯಾಕೇಟುಗಳು ಕಂಡುಬಂದಿದ್ದು, ಸದರಿ ಮದ್ಯವು ಅಕ್ರಮವಾಗಿ ಮಾರಾಟ ಮಾಡಲು ತಂದಿರುವ ಮದ್ಯ ಎಂದು ತಿಳಿದುಕೊಂಡು ಚಾಸಾ-1 ರವರು ಪಂಚನಾಮೆಯ ಮೂಲಕ ಮದ್ಯವನ್ನು ತಮ್ಮ ವಶಕ್ಕೆ ಪಡೆದುಕೊಂಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ4) ಪ್ರಾ.ಸಾ-4–ದಿನೇಶ ಕುಮಾರ್, ಮುಖ್ಯ ಪೇದೆರವರು ತಮ್ಮ ಸಾಕ್ಷ್ಯದಲ್ಲಿ ದಿಃ16.11.2022 ರಂದು ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ನೀಡಿದ ದೂರು, ಮಹಜರ್ ಮುದ್ದೆಮಾಲನ್ನು ಸ್ವೀಕರಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿದ್ದು, ಮುದ್ದೆಮಾಲಿನ ಕುರಿತು ಪಿಎಫ್ ವರದಿ ಸಲ್ಲಿಸಿದ್ದಾಗಿ,

ಸದರಿ ಸಾಕ್ಷಿದಾರರು ಮುಂದುವರೆದು, ದಿಃ17.11.2022 ರಂದು ಚಾಸಾ-2 ರಿಂದ 6 ರವರುಗಳ ಹೇಳಿಕೆಗಳನ್ನು ದಾಖಲೆ ಮಾಡಿಕೊಂಡು, ಅದೇ ದಿನ ಅಮಾನತ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ರಾಸಾಯನಿಕ ವಿಶ್ಲೇಷಣೆಗಾಗಿ ಚಾಸಾ-7 ರವರಿಗೆ ಕಳುಹಿಸಿಕೊಟ್ಟು

ನಂತರ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-11 ರವರಿಗೆ ವಹಿಸಿಕೊಟ್ಟಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರಃ5) ಪ್ರಾ.ಸಾ-3– ಬಸನಗೌಡ, ಪಿ ಎಸ್ ಐ ರವರು ತಮ್ಮ ಸಾಕ್ಷ್ಯದಲ್ಲಿ ದಿಃ09.06.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ, ಅದೇ ದಿನ ಚಾಸಾ-7 ರವರಿಂದ ರಾಸಾಯನಿಕ ಪರೀಕ್ಷಾವರದಿಯನ್ನು ಮತ್ತು ಮುದ್ದೆಮಾಲನ್ನು ಸ್ವೀಕರಿಸಿಕೊಂಡು, ಅದುವರೆಗಿನ ತನಿಖೆಯಿಂದ ಆರೋಪ ಸಾಬೀತು ಆದ ಕಾರಣ ಅಂತಿಮ ವರದಿ ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವೇನು ಹೇಳುತ್ತೀರಿ?

ಉಃ

ಪ್ರ 6) ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೇ ಅಥವಾ ಲಿಖಿತವಾಗಿ ಹೇಳಿಕೆ ನೀಡುದೇನಾದರೂ ಇದೆಯೇ?

ಉಃ

ಪ್ರ 7) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೇ?

ಉಃ

(ಈ ಮೇಲ್ಕಂಡ ಹೇಳಿಕೆಯನ್ನು ನಾನು ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸಿದ್ದೇನೆ.

ದಿನಾಂಕ ಃ ೨೩.೦೯.೨೦೨೪

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾ.ದಂ., ತರೀಕೆರೆ.